ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ,ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969

ತ್ರೈಮಾಸಿಕ ಪತ್ರಿಕೆ
(Quarterly News Letter)
ಜನವರಿ - ಮಾರ್ಚ್ 2013

ಮಿಂಚಂಚೆ: dvgtkvk@yahoo.con
Website: www.taralabalukvk.con
ಸಂಪುಟ-6 ಸಂಚಿಕೆ-2

## ಸಿಂಚನಕ್ಕೆ ಮುನ್ನ .......,

**ಸಹೃದಯ ಬಂಧುಗಳೇ,**

ಹೊಸ ವರ್ಷ 2013 ಬಲು ಬಿರುಸಿನಿಂದಲೇ ಆರಂಭವಾಗಿದೆ. ಮೂರು ಮಾಸಗಳು ಹೇಗೆ ಮುಗಿದವು ಎಂಬುದು ತಿಳಿಯಲಿಲ್ಲ. ಮಳೆಯ ಸಿಂಚನದ ಆವಶ್ಯಕತೆ, ಹಿಂದೆಂದಿಗಿಂತಲೂ ಈಗ ಅತ್ಯಂತ ತುರ್ತಾಗಿದೆ. ಬಿರು ಬೇಸಿಗೆಯ ಅನುಭವ ಅಬಾಲ ವೃದ್ಧರಿಗೆ ನಿಚ್ಚಳವಾಗಿ ಆಗುತ್ತಿದೆ. ನಮ್ಮ ಕೇಂದ್ರದಲ್ಲಿರುವ ಒಂದು ಕೊಳವೆ ಬಾವಿಯಿಂದ ನೀರಿನ ಎಲ್ಲಾ ಅಗತ್ಯಗಳನ್ನು (ಕಛೇರಿ, ಸಿಬ್ಬಂದಿ ವಸತಿಗೃಹ, ರೈತರ ವಸತಿ ಗೃಹ, ಬೆಳೆಯ ತಾಕುಗಳು, ಮೀನುಕೃಷಿ ಕೊಳಗಳು, ಹೂವಿನಗಿಡಗಳು ಇತ್ಯಾದಿ) ಪೂರೈಸಿ ಕೊಳ್ಳುತ್ತಿರುವಾಗ, ಯಾವಾಗ ನೀರು ಖಾಲಿಯಾಗಿ ಬಿಡುವುದೋ ಎಂಬ ಧಾವಂತ. ಮಳೆಪೂರಣ ವ್ಯವಸ್ಥೆ ಇದೆ. ಆದರೆ, ಮಳೆಯೇ ಬರಲಿಲ್ಲವೆ. ನಮ್ಮ ಅನೇಕ ರೈತರು ಬೇಡ ಬೇಡವೆಂದರೂ ಭತ್ತ ನಾಟಿಮಾಡಿ, ಭದ್ರ ಕಾಲುವೆ ನೀರು ಪೂರ್ಣವಾಗಿ ದೊರಕದೆ, ಇತ್ತ ಮೇವಿಗೂ ಸೂಕ್ತವಾಗದ ರೀತಿಯಲ್ಲಿ ಭತ್ತ ಬೆಳೆದು, ಒಣಗುತ್ತಿರುವುದನ್ನು ಕಂಡರೆ ಹೃದಯ ಹಿಂಡಿ ಹೋಗುತ್ತದೆ. ಬೋರ್‌ವೆಲ್ ಸಹಾಯದಲ್ಲಿ ಹಠಹಿಡಿದು ಭತ್ತದೊಂದಿಗೆ ಗೆದ್ದವರ ನಿಟ್ಟುಸಿರು ಬೇಸಿಗೆಯನ್ನು ಮತ್ತಷ್ಟು ಬಿಸಿಯಾಗಿಸಿದೆ.

ಈ ವರ್ಷ ಅಂದರೆ 2013-14 ರ ಸಾಲಿನ ಕ್ರಿಯಯೋಜನೆ ತಯಾರಿ ಮತ್ತು ಮಂಡನೆ ಪ್ರಸ್ತುತವಾಗಿ ಮಾಡಿದ ಬಹುಮುಖ್ಯ ಕೆಲಸಗಳು. 12ನೇ ವೈಜ್ಞಾನಿಕ ಸಲಹಾ ಸಮಿತಿಯ ಸಭೆಯನ್ನು ಮಾಡಿ, ಅನೇಕ ಉಪಯುಕ್ತ ಸಲಹೆಗಳನ್ನು ಪಡೆದಿದ್ದಾಯ್ತು. ನಿಕ್ರಾ ಯೋಜನೆಯಡಿ, ಸಿದ್ದನೂರಿನ ರೈತರನ್ನು ಕೇರಳದ ಕಣ್ಣೂರು, ಶಿವಮೊಗ್ಗ, ಉಡುಪಿ, ಉತ್ತರಕನ್ನಡ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರಗಳಿಗೆ ಭೇಟಿ ಕೊಡಿಸಿದ್ದು ವಿಶೇಷವಾಗಿತ್ತು. ಮಹಿಳಾ ಗುಂಪುಗಳಿಗೆ ಹೈನುಗಾರಿಕಾ ತರಬೇತಿಗಳನ್ನು ಸತತವಾಗಿ ನೀಡಿ, ಕೃಷಿ ವಿಜ್ಞಾನ ಕೇಂದ್ರದ ಪಾತ್ರವನ್ನು ಹಿಗ್ಗಿಸಿದ್ದು ಸಮಾಧಾನ ತರುವಂಥದ್ದು; ಹೆಮ್ಮೆಯ 'ತೆಂಗಿನ ಸೈನ್ಯ'ಕ್ಕೆ ಮತ್ತಷ್ಟು ಸಿಪಾಯಿಗಳನ್ನು ಮತ್ತೆರಡು ತರಬೇತಿಗಳ ಮೂಲಕ ಸೇರಿಸಿಕೊಂಡಿದ್ದು ಪ್ರಮುಖ ಅಂಶಗಳಲ್ಲೊಂದು. ಜೊತೆಗೆ ಜೈವಿಕ ಇಂಧನ ಜಾಗೃತಿ ಕಾರ್ಯಕ್ರಮ ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಲು ಸಾಧ್ಯವಾಯ್ತು.

ಈ ವರ್ಷದ ಗಣರಾಜ್ಯೋತ್ಸವ, ಅಂತರಾಷ್ಟ್ರಿಯ ಮಹಿಳಾ ದಿನ, ವಿಶ್ವ ಜಲದಿನ, ವಿಶ್ವ ಹವಾಮಾನ ದಿನ – ಇವುಗಳ ಅರ್ಥಪೂರ್ಣ ಆಚರಣೆಗಳನ್ನು ರೈತ ಮಹಿಳಾ ರೈತರೊಡ ಗೂಡಿ ಆಚರಿಸಿದೆವು.

Trends in food microbiology ಎಂಬ ರಾಷ್ಟ್ರೀಯ ಸಭೆಗೆ ದಾವಣಗೆರೆ ವಿಶ್ವ ವಿದ್ಯಾಲಯಕ್ಕೆ ಆಗಮಿಸಿದ ಶ್ರೀ ಕೆ.ಸಿ. ರಘು (ಪ್ರಖ್ಯಾತ ಆಹಾರತಜ್ಞ), ನಮ್ಮ ಕೃಷಿ ವಿಜ್ಞಾನ ಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆಯ ಮಾತಾಡಿದ್ದು, ಉತ್ಸಾಹವನ್ನು ಹೆಚ್ಚಿಸಿದೆ. 'ಬನಾನ ಸ್ಪೆಷಲ್' ಮಣ್ಣು-ನೀರು ಪರೀಕ್ಷೆ, ರೋಗ-ಕೀಟ ಬಾಧೆಗಳ ಪರಿಹಾರ ಮಾಹಿತಿ, ವಿವಿಧ ಮೇವುಗಳು, ಅಜೋಲ್ಲಾ, ಮೀನು ಕೃಷಿ ಪ್ರಾತ್ಯಕ್ಷಿಕೆಗಳು ರೈತರನ್ನು ಕೃಷಿ ವಿಜ್ಞಾನ ಕೇಂದ್ರದಡೆಗೆ ಹೆಚ್ಚು ಹೆಚ್ಚಾಗಿ ಆಕರ್ಷಿಸುತ್ತಿವೆ. ಆಕಾಶವಾಣಿ, ಚಿತ್ರದುರ್ಗದಲ್ಲಿ ದೂರವಾಣಿಯಲ್ಲಿ ರೈತರೊಂದಿಗೆ ನೇರ ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ನಮ್ಮ ತಂಡದ ಕೆಲಸದಸ್ಯರು ನೀಡಿದ್ದು ವಿಶೇಷ ಅನುಭವವಾಗಿತ್ತು.

ರೈತರ ತಾಕುಗಳಿಗೆ ಭೇಟಿ, ಕೃಷಿ ಶಿಬಿರಗಳು, ಕ್ಷೇತ್ರೋತ್ಸವಗಳು, ದ್ವೈಮಾಸಿಕ ಕಾರ್ಯಾಗಾರ, ಆಹ್ವಾನಿತ ಉಪನ್ಯಾಸಗಳು, ಕೃಷಿ ತೋಟಗಾರಿಕೆ ವಸ್ತು ಪ್ರದರ್ಶನ ಹೀಗೆ ಹತ್ತು ಹಲವಾರು ಕೃಷಿ ವಿಜ್ಞಾನ ವಿಸ್ತರಣೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಕಾಲಸರಿದಿದ್ದೆ ಗೊತ್ತಾಗಲಿಲ್ಲ. ದಿನಚರಿ ಪುಸ್ತಕದ ಪುಟಗಳಲ್ಲಿ ಕಣ್ಣಾಡಿಸಿದಾಗ, ಒಂದು ದಿನದಂತೆ ಇನ್ನೊಂದಿರದಿದ್ದುದು ಅರಿವಾಯ್ತು. Time is so dynamic ಅನ್ನಿಸಿತು.

ಈ ತ್ರೈಮಾಸಿಕ ಅವಧಿಯಲ್ಲಿ ನಾನರಿತ ಮಾತುಗಳು:

- "Nobody can do everything but everybody can do something"
- Rain water continuously hits rock but water gets splashed away and not the rock.
- Washing stone gets hit but cleanses the clothes.

ಇವೆಲ್ಲವೂ ಕೃಷಿ ಕಾರ್ಯದಲ್ಲಿರುವವರಿಗೆ ಎಂದಾದರೂ ಉಪಯುಕ್ತವಾದಾವು. ಕಳೆದ ವರ್ಷದ ಪ್ರಗತಿ ವರದಿ ತಯಾರಿಕೆಯಲ್ಲಿ ನಿಧಾನಕ್ಕೆ ಮುಳುಗುತ್ತಿದ್ದೇವೆ. ಹಾಗೆಯೇ, ಅನುಮೋದನೆ ದೊರೆತ ಈ ವರ್ಷದ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕಾಗಿ ಸಣ್ಣಗೆ ತಯಾರಿಯು ಸಾಗಿದೆ. ಎರಡಕ್ಕೂ ನಿಮ್ಮ ಹಾರೈಕೆಯ ಬೆಂಬಲ ಬೇಕೆ ಬೇಕು. ನಿಮಗೆ ಶುಭವಾಗಲಿ,

ವಂದನೆಗಳು,

**ಪ್ರೀತಿಯಿಂದ**

**ಡಾ. ದೇವರಾಜ ಟಿ.ಎನ್.**

## ಅಧ್ಯಯನ ಪ್ರವಾಸ :





'ನಿಕ್ರಾ' ಯೋಜನೆಯಡಿ ಸಿದ್ದನೂರು ಗ್ರಾಮದ ರೈತರಿಗೆ ಅಧ್ಯಯನಾ ಪ್ರವಾಸವನ್ನು ಶಿವಮೊಗ್ಗ, ಉಡುಪಿ, ಉತ್ತರಕನ್ನಡ ಮತ್ತು ಕೇರಳದ ಕಣ್ಣೂರು ಕೃಷಿ ವಿಜ್ಞಾನ ಕೇಂದ್ರಗಳಿಗೆ ಹಮ್ಮಿಕೊಳ್ಳಲಾಗಿತ್ತು. (ದಿನಾಂಕ 13-03-13 ರಿಂದ 15-3-2012).

## ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು :



ಜಿಲ್ಲಾ ಪಂಚಾಯತಿ, ದಾವಣಗೆರೆ, ಎಸ್. ಜಿ. ಎಸ್. ವೈ ಯೋಜನೆಯಡಿ ಸ್ವ-ಸಹಾಯ ಸಂಘದ ಮಹಿಳಾ ಸದಸ್ಯರುಗಳಿಗೆ 'ಸಮಗ್ರ ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ಉತ್ಪಾದನಾ ಪರಿಣಿತ ತರಬೇತಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಳೆದ ತ್ರೈಮಾಸಿಕದಲ್ಲಿ 6 ದಿನಗಳ 7 ತರಬೇತಿಗಳನ್ನು 373 ಮಹಿಳಾ ಸದಸ್ಯರುಗಳಿಗೆ ನೀಡಲಾಗಿದೆ.



ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ಜಿಲ್ಲೆಯ ನಿರುದ್ಯೋಗ ಯುವಕರಿಗೆ 'ತೆಂಗಿನ ಮರ ಹತ್ತುವುದು ಮತ್ತು ಸಸ್ಯ ಸಂರಕ್ಷಣೆ' ವಿಷಯದಲ್ಲಿ 44 ಯುವಕರಿಗೆ 2 ತರಬೇತಿಗಳನ್ನು ನೀಡಿ, ತೆಂಗಿನ ಮರ ಹತ್ತುವ ಸಾಧನವನ್ನು ವಿತರಿಸಲಾಗಿದೆ.

## ಕೃಷಿ ವಸ್ತು ಪ್ರದರ್ಶನ :





ದಿನಾಂಕ 2 ರಿಂದ 4 ಫೆಬ್ರವರಿ 2013 ರವರೆಗೆ ತೋಟಗಾರಿಕೆ ಇಲಾಖೆ, ದಾವಣಗೆರೆ ಇವರು ಏರ್ಪಡಿಸಿದ್ದ 'ಫಲ ಪುಷ್ಪ ಪ್ರದರ್ಶನದಲ್ಲಿ' ಕೇಂದ್ರವು ಕೃಷಿ ವಸ್ತು ಪ್ರದರ್ಶನ ಏರ್ಪಡಿಸಿ ರೈತರಿಗೆ ಕೃಷಿ ಮತ್ತು ಕೃಷಿಯೇತರ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಲಾಯಿತು.

## ಕೃಷಿ ಮಾಹಿತಿ ಶಿಬಿರಗಳು :



ದಿನಾಂಕ 7-01-2013
ಅಣಜಿಗೆರೆ, ಹರಪನಹಳ್ಳಿ ತಾಲ್ಲೂಕು.



ದಿನಾಂಕ 8-1-2013
ಕಣಿವೆಹಳ್ಳಿ, ಹರಪನಹಳ್ಳಿ ತಾಲ್ಲೂಕು.

## ಆಚರಿಸಿದ ವಿಶೇಷ ದಿನಾಚರಣೆಗಳು :




ದಿನಾಂಕ 8-3-2013
'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'.



ದಿನಾಂಕ 23-03-2013
'ವಿಶ್ವ ಜಲ ದಿನ' ಮತ್ತು 'ವಿಶ್ವ ಹವಾಮಾನ ದಿನಾಚರಣೆ'.

## ಕೃಷಿ ಮುನ್ಸೂಚನೆಗಳು :

**ಬೇಸಾಯ ಶಾಸ್ತ್ರ**

- ದ್ವಿದಳ ದಾನ್ಯಗಳಾದ ಹೆಸರು, ಅವರೆ, ಉದ್ದು, ಹುರುಳಿಗಳನ್ನು ಮಳೆ ಬಂದ ತಕ್ಷಣ ಬಿತ್ತನೆ ಮಾಡಬೇಕು.
- ಏಕದಳ ಬೆಳೆ ಮೆಕ್ಕೆಜೋಳದ ಜೊತೆಗೆ ಅಂತರಬೆಳೆಯಾಗಿ ತೊಗರಿ/ ಅವರೆಯನ್ನು ಬೆಳೆಯಬೇಕು. (6:1/6:2).
- ಮಣ್ಣಿನ ಪರೀಕ್ಷೆಯ ಅಧಾರದ ಮೇಲೆ ರಸಗೊಬ್ಬರಗಳನ್ನು ಬಳಸಬೇಕು.
- ಜೈವಿಕ ಗೊಬ್ಬರಗಳಾದ ಅಝೋಸ್ಪಿರಿಲಂ, ರೈಜೋಬಿಯಂ ಮತ್ತು ಪಿ.ಎಸ್.ಬಿ ಯನ್ನು ಬಿಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ ರಾಸಾಯನಿಕ ಗೊಬ್ಬರದ (ಯೂರಿಯಾ) ಬಳಕೆಯನ್ನು ಶೇ. 10-15% ಕಡಿಮೆ ಮಾಡಬಹುದು.
- ಏಕದಳ ಧಾನ್ಯಗಳನ್ನು ಬಿತ್ತನೆ ಮಾಡುವ ಮೊದಲು ಜೈವಿಕ ಗೊಬ್ಬರ (Azosprillum 2 kg/ha.) ದಿಂದ ಬೀಜೋಪಚಾರ ಮಾಡಬೇಕು.

**ಮಣ್ಣು ಮತ್ತು ನೀರಿನ ಸಂರಕ್ಷಣೆ:**

- ಮಳೆ ನೀರಿನ ಸಮರ್ಥ್ಯ ಉಪಯೋಗ ಮತ್ತು ಬೆಳೆಗಳ ಉತ್ಪಾದನೆಯಲ್ಲಿ ನಿರಂತರ ಹೆಚ್ಚಳ ಪಡೆಯುವುದಕ್ಕಾಗಿ ಕೊಚ್ಚಿ ಹೋಗುವ ಮಣ್ಣನ್ನು ತಡೆಗಟ್ಟುವುದು.
- ಟ್ರಂಚ್ ಕಂ ಬದುಗಳನ್ನು (Trench Cum Bund) ನಿರ್ಮಾಣ ಮಾಡಬೇಕು.
- ಇಳಿಜಾರಿಗೆ ಅಡ್ಡಲಾಗಿ ಬಿತ್ತನೆ ಮಾಡಬೇಕು.
- ಪ್ರತಿ ಜಮೀನಿನಲ್ಲಿ ಬದುಗಳನ್ನು ಹಾಕಬೇಕು.
- ಕೃಷಿ ಹೊಂಡಗಳನ್ನು ಮಾಡಿಕೊಂಡು, ಅದರಲ್ಲಿ ಮೀನುಗಳನ್ನು ಸಾಕಬೇಕು.
- ಮಾಗಿ ಉಳುಮೆ ಮಾಡಬೇಕು.



Trench Cum Bund

**ಸಸ್ಯ ಸಂರಕ್ಷಣೆ**

**ಹತ್ತಿ:**

- ಬೆಂಡೆ ಬೆಳೆಯನ್ನು ಬಲೆ ಬೆಳೆಯಾಗಿ ಬೆಳೆಯುವುದು ಸೂಕ್ತ (25:1). (25 ಸಾಲು ಹತ್ತಿ: 1 ಸಾಲು ಬೆಂಡೆ) ಇದರಿಂದ ಕಾಂಡಕೊರಕ ಮತ್ತು ಕಾಯಿ ಕೊರಕ ನಿಯಂತ್ರಿಸಬಹುದು.
- **ಅಡಿಕೆ: ಕೊಳೆ ರೋಗ**

**ಲಕ್ಷಣ:** ಎಳೆಕಾಯಿಗಳ ತೊಟ್ಟಿನ ಭಾಗದಲ್ಲಿ ನೀರಿನಿಂದ ತೊಯ್ದ ಕಲೆಗಳು ಉಂಟಾಗುತ್ತದೆ. ಕಾಯಿಗಳ ಮೇಲೆ ಬೂದು ಮಿಶ್ರಿತ ಕಂದು ಬಣ್ಣದ ಬೂಸ್ಟಿನ ಬೆಳವಣಿಗೆ ಕಾಣುತ್ತದೆ. ಕಾಯಿಗಳು ಕೊಳೆತು ಹೆಚ್ಚಿನ ಸಂಖ್ಯೆಯಲ್ಲಿ ಉದುರುತ್ತದೆ.

**ಹತೋಟಿ:** ರೋಗಕ್ಕೆ ತುತ್ತಾದ ಕಾಯಿಗಳನ್ನು ನಾಶಪಡಿಸಬೇಕು, ಮುಂಗಾರು ಪ್ರಾರಂಭಕ್ಕೆ ಮೊದಲು ಶೇ. 1 ರ ಬೋರ್ಡೋ ದ್ರಾವಣ ಅಥವಾ ತಾಮ್ರದ ಆಕ್ಸಿಕ್ಲೋರೈಡ್ (3 ಗ್ರಾಂ./ಲೀ.) ಸಿಂಪಡಿಸಬೇಕು.

**ತೋಟಗಾರಿಕೆ**

- ಪ್ರಸ್ತುತ ವರ್ಷ ಅಡಿಕೆಯಲ್ಲಿ 2 ತಿಂಗಳು ಮೊದಲೇ ಇಂಗಾರುಗಳು ಬಂದಿರುತ್ತವೆ. ಬಿಸಿಲಿನ ಧಗೆಗೆ ಹರಳು ಉದುರುವುದು ಹಾಗೂ ಇಂಗಾರ ಒಣಗುವ ಸಮಸ್ಯೆಯಿದೆ. ಆದ್ದರಿಂದ ತೋಟಗಳಲ್ಲಿ ತುಂತುರು ನೀರಾವರಿ ಪದ್ಧತಿಯನ್ನು ಅನುಸರಿಸಿದರೆ ಉತ್ತಮ. ಇದರಿಂದ ತೋಟಗಳಲ್ಲಿನ ಬಿಸಿಲಿನ ತಾಪಮಾನ ಕಡಿಮೆಯಾಗಿ ಹರಳು ಉದುರುವ ಸಮಸ್ಯೆ ಕಡಿಮೆಯಾಗುವುದು.

**ಪಶುಪಾಲನೆ**

- ರಾಸುಗಳಿಗೆ ಒಣ ಮೇವಿನ ಬಳಕೆ ಹೆಚ್ಚಿನದಾಗಿ ಮಾಡುತ್ತಿರುವ ರೈತರುಗಳು ನೆಕ್ಕು ಬಿಲ್ಲೆಯನ್ನು (UMMB) ಬಳಸುವುದರಿಂದ ಮೇವಿನ ಜೀರ್ಣಶಕ್ತಿಯನ್ನು ಜಾಸ್ತಿ ಮಾಡಬಹುದಾಗಿದೆ.
- ವಾತಾವರಣದ ಉಷ್ಣಾಂಶ ಜಾಸ್ತಿಯಾಗುತ್ತಿರುವುದರಿಂದ ಹೈನುರಾಸುಗಳಿಗೆ ಆಗಿಂದಾಗ್ಗೆ ಬೆನ್ನಿನ ಮೇಲೆ ನೀರನ್ನು ಹಾಕುವುದರಿಂದ ಹಾಲಿನ ಉತ್ಪಾದನೆ ಕುಗ್ಗುವುದನ್ನು ತಡೆಯಬಹುದಾಗಿದೆ.
- ಜಾನುವಾರುಗಳಿಗೆ ಒಣ ಮೇವಿನ ಲಭ್ಯತೆ ಕಡಿಮೆ ಇರುವುದರಿಂದ, ಲಭ್ಯವಿರುವ ಮೇವನ್ನು ಖನಿಜ-ಲವಣಗಳಿಂದ ಪೌಷ್ಠಿಕರಿಸಿ ಬಳಸುವುದು ಲಾಭದಾಯಕ.

## ಮೀನು ಕೃಷಿ ಮುನ್ಸೂಚನೆಗಳು :

- ಮೀನು ಕೃಷಿ ತಯಾರಿಕೆಗೆ ಸಕಾಲ
- ಮಣ್ಣಿನ $p^H$ ಪರೀಕ್ಷಿಸಿ, ತಜ್ಞರ ಸಲಹೆ ಪಡೆಯಿರಿ.
- ಹಾಲಿ ಇರುವ ಹೊಂಡಗಳನ್ನು ತಳ ಒಣಗಿಸಿ ಸುಣ್ಣ (200 ಕೆಜಿ / ಎಕರೆಗೆ) ಹಾಕಿ ಸಗಣಿ ಗೊಬ್ಬರ ಹಾಕಿ (4q/ಎಕರೆಗೆ), ನೀರು ಬಿಟ್ಟು (5' ಕನಿಷ್ಠ) ತಯಾರಿಸಿಟ್ಟುಕೊಳ್ಳಬಹುದು.
- ವಾರದ ನಂತರ ಪ್ಲಾಂಕ್ಟನ್ ಸಾಂದ್ರತೆ ದೃಢಪಡಿಸಿಕೊಳ್ಳಿ.
- 2.5 – 3cm ಉದ್ದವುಳ್ಳ ಒಳ್ಳೆಯ ಮೀನುಮರಿಗಳನ್ನು 2–3/$m^2$ ಸಾಂದ್ರತೆಯಲ್ಲಿ ದಾಸ್ತಾನು ಮಾಡಿ
- ಒಟ್ಟು ಮೀನು ತೂಕದ 8–10 % ರಷ್ಟರ ಪ್ರಮಾಣದಲ್ಲಿ ಆಹಾರ ಕೊಡಿ ಮತ್ತು ಹೆಚ್ಚಿನ ಮಾಹಿತಿಗೆ ಸಮೀಪದಲ್ಲಿರುವ ತಜ್ಞರನ್ನು ಸಂಪರ್ಕಿಸಿ.

## ಎರೆಹುಳು ಗೊಬ್ಬರ- ಯಾವ ಬೆಳೆಗೆ ಎಷ್ಟು ?

| ಬೆಳೆ | ಕೊಡಬೇಕಾದ ಗೊಬ್ಬರದ ಪ್ರಮಾಣ (ಎಕರೆಗೆ) |
|---|---|
| ಏಕದಳ ಧಾನ್ಯ | 2 ಟನ್ |
| ದ್ವಿದಳ ಧಾನ್ಯ | 2 ಟನ್ |
| ಎಣ್ಣೆಕಾಳು ಬೆಳೆಗಳು | 3–5 ಟನ್ |
| ಸಾಂಬಾರು ಬೆಳೆಗಳು | 2–10 ಕೆಜಿ / ಪ್ರತಿ ಗಿಡಕ್ಕೆ |
| ಹಣ್ಣಿನ ಬೆಳೆಗಳು | 2–3 ಕೆಜಿ / ಪ್ರತಿ ಗಿಡಕ್ಕೆ |
| ವಾಣಿಜ್ಯ ಬೆಳೆಗಳು | 5 ಟನ್ |
| ತೋಟಗಾರಿಕೆ ಬೆಳೆಗಳು | 4–5 ಕೆಜಿ. ಪ್ರತಿ ಗಿಡಕ್ಕೆ |

ತೆರೆದ–ಅಂಚೆ

ಗೆ,

ಪ್ರಧಾನ ಸಂಪಾದಕರು: ಡಾ. ದೇವರಾಜ ಟಿ.ಎನ್.

ಸಹ ಸಂಪಾದಕರು: ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್.,

ಪ್ರಕಾಶಕರು : ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ-577004, ಕರ್ನಾಟಕ